## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ
## ಚನ್ನರಾಯಪಟ್ಟಣ.

**ಸಿ.ಸಿ.ಃ 859/2015**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಕಿರಣ್ | ಚಾಸಾ-2 |
| **ತಂದೆ/ಗಂಡನ ಹೆಸರು** | ಃ ಅಣ್ಣೇಗೌಡ | ಅ.ಸಾ-1 |
| **ವಯಸ್ಸು** | ಃ 23 ವರ್ಷ | |
| **ಉದ್ಯೋಗ** | ಃ ಚಾಲಕ | ಪ್ರಮಾಣ ವಚನ ಬೋಧಿಸಲಾಯಿತು |
| **ವಾಸ** | ಃ ಹೊನ್ನೇನಹಳ್ಳಿ ಗ್ರಾಮ. | ದಿನಾಂಕಃ 23-06-2018 |

**ಮುಖ್ಯ ವಿಚಾರಣೆ ಃ- ನುರಿತ ಎ.ಪಿ.ಪಿ. ಯವರಿಂದ**

ಚಾಸಾ-1 ರಿಂದ 4 ಗೊತ್ತು. ಆರೋಪಿಗಳು ಗೊತ್ತು. ದಿನಾಂಕಃ13.05.2014 ರಂದು ನಾನು ಮತ್ತು ಚಾಸಾ-1 ಬೆಳಿಗ್ಗೆ 10.30 ರ ಸಮಯದಲ್ಲಿ ಬೈಕಿನಲ್ಲಿ ನಮ್ಮ ತೋಟದ ಬಳಿ ಹೋಗಿ ವಾಪಸ್ಸು ಬರುತ್ತಿದ್ದಾಗ ಆರೋಪಿ 1 ರವರು ಅವರ ತೋಟದ ಬಳಿ ಬರುತ್ತಿದ್ದಾಗ ನಮ್ಮ ದಾರಿಯಲ್ಲಿ ಯಾಕೆ ಬರುತ್ತೀರಾ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ನನಗೆ ಕಪಾಳಕ್ಕೆ ಹೊಡೆದು ಚಾಸಾ-1 ರವರಿಗೆ ಮೈಕೈಗೆ ಹೊಡೆದು ಗಾಯಪಡಿಸಿದ. ಆಗ ಚಾಸಾ-3 ಮತ್ತು 4 ರವರು ಬಂದು ಜಗಳ ಬಿಡಿಸಿದರು. ಆಗ 1 ನೇ ಆರೋಪಿ ಈ ಜಾಗದಲ್ಲಿ ಬಂದರೆ ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿದ. ನಂತರ ವಿಚಾರ ತಿಳಿದು ನನ್ನ ತಂದೆ ಚಾಸಾ-5 ರವರು ಸ್ಥಳಕ್ಕೆ ಬಂದರು. ಆಗ ನನ್ನನ್ನು ಮತ್ತು ಚಾಸಾ-1 ರವರನ್ನು ನನ್ನ ತಂದೆ ಕರೆದುಕೊಂಡು ಹೋಗಿ ಚನ್ನರಾಯಪಟ್ಟಣ ಆಸಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಅದೇ ದಿನ ಉಳಿದ ಆರೋಪಿಗಳು ಸುಮಾರು 12 ಗಂಟೆ ಸಮಯದಲ್ಲಿ ದೊಣ್ಣೆ ಮತ್ತು ಕಲ್ಲುಗಳನ್ನು ತೆಗೆದುಕೊಂಡು ಹೋಗಿ ಚಾಸಾ-8 ರವರ ಮನೆಗೆ ಕಲ್ಲು ಮತ್ತು ದೊಣ್ಣೆಯಿಂದ ಜಖಂ ಮಾಡಿರುತ್ತಾರೆ. ಈ ಸಂಬಂದ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

*ಪಾಟೀ ಸವಾಲು ಃ- ಶ್ರೀ ಎಲ್.ಪಿ.ಜಿ ಆರೋಪಿ ವಕೀಲರಿಂದ*

ನಮ್ಮ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಚಾಸಾ-1 ರವರ ಬೈಕಿನಲ್ಲಿ ಹೋಗಿರುತ್ತೇವೆ. ಬೈಕ್ ನಂಬರ್ ಗೊತ್ತಿಲ್ಲ. ವಾಪಸ್ಸು ಬರುವಾಗ 1 ನೇ ಆರೋಪಿಯ ಜಮೀನಿನ ಮೇಲೆ ಬರುತ್ತಿದ್ದೆವು ಎಂದರೆ ಸರಿ. ಸದರಿ ಸ್ಥಳದಲ್ಲಿ ತಿರುಗಾಡಲು ದಾರಿ ಬಿಟ್ಟಿದ್ದು ಖರಾಬು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಅದೇ ದಿನ ಆರೋಪಿ ನಮ ನಮ್ಮ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಮ್ಮನ್ನು ಬಂದನಕೊಳಪಡಿಸಿದರು ಎಂದರೆ ಸರಿ.

1 ನೇ ಆರೋಪಿ ನನಗೆ ಬಲದ ಕೆನ್ನೆಗೆ ಹೊಡೆದ. ಆ ಸಮಯಕ್ಕೆ 1 ನೇ ಆರೋಪಿ ಹಾಗೂ ಚಾಸಾ-3 ಮತ್ತು 4 ರವರು ಇದ್ದರು. ಸುನಿಲ್ ರವರು ಪಕ್ಕದ ಜಮೀನಿನಲ್ಲಿದ್ದರು. ಮಂಜುಳಮ್ಮ ರವರು ಸಹ ಪಕ್ಕದ ಜಮೀನಿನಲ್ಲಿದ್ದರು. ಆರೋಪಿಯ ಜಮೀನಿನ ಪಕ್ಕ ಚಾಸಾ-3 ಮತ್ತು 4 ರವರ ಜಮೀನು

ಇಲ್ಲ ಎಂದರೆ ಸರಿ. ಚಾಸಾ-1 ರವರಿಗೆ ಮೈಕೈಗೆ ಗಾಯವಾಗಿ ಹಾಗೂ ರಕ್ತವಾಗಿತ್ತು. ಚಾಸಾ-1 ರವರಿಗೆ ಎಡಗೈಗೆ ರಕ್ತ ಬಂದಿತ್ತು.

ಹೊನ್ನೇನಹಳ್ಳಿಯಿಂದ ಬಾಗೂರಿಗೆ ಸುಮಾರು 2 ವರೆ ಕಿ.ಮೀ ಅಂತರ ಇದೆ. ಬಾಗೂರಿನಲ್ಲಿ ಆಸ್ಪತ್ರೆ ಇದೆ ಎಂದರೆ ಸರಿ. ಬಾಗೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಯಾವುದೆ ತೊಂದರೆ ಇಲ್ಲ. ಆ ನಂತರ ಚಾಸಾ-8 ರವರ ಮನೆಯ ಬಳಿ ಆಗಿರುವ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಚನ್ನರಾಯಪಟ್ಟಣ ಆಸ್ಪತ್ರೆಗೆ ಯಾವುದೋ ಒಂದು ಆಟೋೀದಲ್ಲಿ ಬಂದೆವು. ಪೊಲೀಸರು ನನ್ನ ಹೇಳಿಕೆಯನ್ನು ಮನೆಯಲ್ಲಿ ಪಡೆದಿರುತ್ತಾರೆ. ನಾನು ಮತ್ತು 1 ನೇ ಆರೋಪಿ ಹಾಗೂ ಚಾಸಾ-1 ರವರು ರಕ್ತ ಸಂಬಂಧಿಕರು ಎಂದರೆ ಸರಿ. ಈ ಸಂಬಂದ ಸಿವಿಲ್ ಪ್ರಕರಣಗಳು ಚಾಲ್ತಿಯಲ್ಲಿವೆ ಎಂದರೆ ಸರಿ. ಸಿವಿಲ್ ದಾವೆಗಳು ಈಗಲೂ ಸಹ ಚಾಲ್ತಿಯಲ್ಲಿವೆ ಎಂದರೆ ಸರಿ. ಮೊದಲು ಪಿರ್ಯಾದಿನ್ನು ನಾವು ನೀಡಿರುತ್ತೇವೆ. 1 ನೇ ಆರೋಪಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, 1 ನೇ ಆರೋಪಿ ನಮ್ಮಗಳ ವಿರುದ್ದ ಪಿರ್ಯಾದಿ ನೀಡಿದ್ದರಿಂದ ಅದನ್ನು ತಪ್ಪಿಸಿಕೊಳ್ಳುವ ಸಲವಾಗಿ ಆರೋಪಿಗಳ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ 1 ನೇ ಆರೋಪಿ ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ದೊಡ್ಡಪ್ಪನಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

*ಮರು ವಿಚಾರಣೆ ಇಲ್ಲ.*

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

**(ಎಸ್.ಚೆನ್ನಸ್ವಾಮಿ)**
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**